**ಶಿಕ್ಷಣ** | ಸಹ್ಯಾದ್ರಿ ಕಾಲೇಜಿನಲ್ಲಿ 'ಟೆಕ್ನೋ ವೀಕ್'

# ವಿದ್ಯಾರ್ಥಿಗಳಿಗೆ ಮಾಹಿತಿ, ಸಂವಾದ

**ಮಹಾನಗರ,** ಸೆ. 28: ಸರ್ ಎಂ ವಿಶ್ವೇಶ್ವರಯ್ಯ ಅವರ 158 ನೇ ಜನ್ಮ ದಿನಾಚರಣೆ ಮತ್ತು 52 ನೇ ಎಂಜಿನಿಯರ್ಸ್ ಡೇ ಅಂಗವಾಗಿ, ರಾಮ್ಕೊ ಸಿಮೆಂಟ್ಸ್ ಸಹಯೋಗದಲ್ಲಿ ಹಾಗೂ ಮಂಗಳೂರು ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಅಸೋಸಿಯೇಶನ್‌ನ ಸಹಭಾಗಿತ್ವದಲ್ಲಿ 'ಟೆಕ್ನೋವೀಕ್ -2019' ಎಂಬ ವಿಷಯದ ಕುರಿತು ಸಿವಿಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ತಾಂತ್ರಿಕ ಸಂವಾದ ಮತ್ತು ವಿಚಾರ ಸಂಕಿರಣ ಅಡ್ಯಾರ್‌ನ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಜರಗಿತು.

ಮಂಗಳೂರು ಮತ್ತು ಸುತ್ತಮುತ್ತಲಿನ ವಿವಿಧ ಎಂಜಿನಿಯರಿಂಗ್ ಕಾಲೇಜುಗಳ ಹಾಗೂ ಸಹ್ಯಾದ್ರಿ ಕಾಲೇಜಿನ 5ನೇ ಸೆಮಿಸ್ಟರ್‌ನ ಸಿವಿಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೇರಿಯನ್ ಪ್ರಾಜೆಕ್ಟ್ ನಿರ್ದೇಶಕ ಆರ್. ಉಜ್ವಲ್ ಡಿ'ಸೋಜಾ ಅವರು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಿವಿಲ್ ಉದ್ದಿಮೆಯ ಕುರಿತು ಮಾಹಿತಿ ನೀಡಿದರು. ಸಿವಿಲ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳ ಬಗ್ಗೆ ಮತ್ತು ಅವುಗಳನ್ನು ಪಡೆದುಕೊಳ್ಳಲು ಹೇಗೆ ಸಿದ್ಧರಾಗಿರಬೇಕೆಂದು ವಿವರಿಸಿದರು.



ಮಾಹಿತಿ, ಸಂವಾದ ಕಾರ್ಯಕ್ರಮದಲ್ಲಿ ಗಣ್ಯರು ಮಾತನಾಡಿದರು.

### ಮೌಲ್ಯಗಳನ್ನು ಅಳವಡಿಸಿ

ಮಣಿಪಾಲದ ಎಂಐಟಿಯ ಪ್ರಾಧ್ಯಾಪಕ ಡಾ| ರಾಘವೇಂದ್ರ ಹೊಳ್ಳ ಅವರು ವೃತ್ತಿಪರ ನೀತಿ ಶಾಸ್ತ್ರದ ಕುರಿತು ತಮ್ಮ ಆಲೋಚನೆಗಳನ್ನು ಮತ್ತು ಅನುಭವಗಳನ್ನು ಹಂಚಿಕೊಂಡರು. ಸಿವಿಲ್ ಎಂಜಿನಿಯರಿಂಗ್ ವೃತ್ತಿಯಲ್ಲಿಅನುಸರಿಸಬೇಕಾದ ಕೋಡ್, ಪ್ರಾಥಮಿಕ ಮೌಲ್ಯಗಳು ಮತ್ತು ಸಾರ್ವತ್ರಿಕ ನೈತಿಕ ತತ್ವಗಳ ಬಗ್ಗೆ ವಿವರಿಸಿದರು.

ನೀತಿಶಾಸ್ತ್ರವು ನಮಗೆ ಏನು ಮಾಡಲು ಹಕ್ಕು ಇದೆ ಮತ್ತು ಏನು ಮಾಡ ಬೇಕೆಂಬುದರ ನಡುವಿನ ವ್ಯತ್ಯಾಸವನ್ನು ತಿಳಿಸುತ್ತದೆ ಎಂದರು. ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ| ನಳಿನಿ ಇ. ರೆಬೆಲ್ಲೊ, ಕಾರ್ಯಕ್ರಮದ ಸಂಯೋಜಕರಾದ ಎಂ.ದೀಪ್ತಿಶ್ರೀ ಎಸ್. ಐತಾಳ್ ಹಾಗೂ ಇತರ ಅಧ್ಯಾಪಕರು ಉಪಸ್ಥಿತರಿದ್ದರು.